ಮಕ್ಕಳಿಗಾಗಿ ಬೈಬಲ್
ಅರ್ಪಿಸುವ



# ಅರಸನಾದ ದಾವೀದನು (ಭಾಗ – 1)

ಬರಹಗಾರರು: Edward Hughes

ಚಿತ್ರಲೇಖಕರು: Lazarus; Alastair Paterson

ಅಳವಡಿಸುವವರು: Ruth Klassen

ಪದ್ಮಾ ಸ್ಮೈಲೇಸ್: Vinay Shirol

ತಯಾರಕರು: Bible for Children
www.M1914.org

©2021 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಸೌಲನು ಕೊಲ್ಲುವವನೆಂದು ಭಯಪಟ್ಟು ದಾವೀದನು ಅಲ್ಲಿಂದ ಓಡಿ ಹೋಗಿ ಆತನ ೪೦೦ ಹಿಂಬಾಲಕರೊಂದಿಗೆ ಕಾಡಿನಲ್ಲಿರುವಂತ ಒಂದು ದೊಡ್ಡ ಗುಹೆಯಲ್ಲಿ ವಾಸಿಸಿದನು.



ಸೌಲನ ಸೈನಿಕರು ದಾವಿದನನ್ನು ಕಂಡು ಹಿಂದಟ್ಟಿದರು ಆದರೆ ದಾವಿದನು ಅಲ್ಲಿಂದ ಮುಂದೆ ಮುಂದೆ ಹೋಗುತ್ತಿದ್ದನು.



ಸೌಲನ ಸೇವಕರಲ್ಲೊಬ್ಬನು ಆತನಿಗೆ ತಿಳಿಸಿದ್ದೇನೆಂದರೆ, ‘ಯಾಜಕರಲ್ಲೊಬ್ಬನು ದಾವೀದನನು ತಪ್ಪಿಸಿಕೊಳ್ಳುವಂತೆ ಸಹಾಯ ಮಾಡುತ್ತಿದ್ದಾನೆಂದು’ ತಿಳಿಸಿದನು. ಅದನ್ನು ಕೇಳಿದ ಸೌಲನು ೮೫ ಯಾಜಕರನ್ನು ಮತ್ತು ಅವರ ಕುಟುಂಬಗಳನ್ನು ಅನ್ಯಾಯವಾಗಿ ಕೊಲ್ಲಿಸಿದನು.





ಒಂದು ದಿನ ಸೌಲನು
ದಾವೀದನನ್ನು ಹಿಡಿಯಬೇಕೆಂದು
ಆತನು ಮತ್ತು ಆತನ ಜನರು
ಅಡಗಿಕೊಂಡಿರಿವ ಗುಹೆಯ
ಹತ್ತಿರ ಹುಡುಕುತ್ತಾ
ಅವರಿದ್ದಲ್ಲಿಗೆ ಬಂದನು.

ಆದರೆ ಸೌಲನು
ಒಬ್ಬಂಟಿಗನಾಗಿ
ಕಾಣಿಸಿಕೊಂಡನು.



ದಾವೀದನು ಸೌಲನನ್ನು ಸುಲಭವಾಗಿ
ಕೊಲ್ಲಬಹುದಾಗಿತ್ತು ಆದರೆ
ಆತನು ಹಾಗೆ ಮಾಡದೆ
ಅತನ ನಿಲುವಂಗಿಯ
ಒಂದು ತುದಿಯನ್ನು
ಕತ್ತರಿಸಿಕೊಂಡನು.

ಸೌಲನು ಹೋಗುವಾಗ ದಾವೀದನು ಆತನನ್ನು ಕರೆದು ಹೇಳಿದ್ದೆನೆಂದರೆ ‘ನಾನು ನಿನ್ನನ್ನು ಕೊಲ್ಲಬಹುದಾಗಿತ್ತು ಅದರೆ ನಾನು ಹಾಗೆ ಮಾಡದೆ ನಿನ್ನ ನಿಲುವಂಗಿಯ ಒಂದು ತುದಿಯನ್ನು ಕತ್ತರಿಸಿಕೊಂಡೆನು’. ನಾನು ನಿರ್ದೋಷಿ ಎಂದು ಈಗಲಾದರು ನಿನಗೆ ತಿಳಿಯಿತ? ಎಂದು ಕೇಳಿದನು.

ಆ ಕ್ಷಣದಲ್ಲಿ ಸೌಲನು ಮಾಡುವುದು ಅತನಿಗೆ ತಪ್ಪೆಂದು ಅರಿವಾಯಿತು, ಆದರೆ ತಿರುಗಿ ಅತನಿಗೆ ದಾವೀದನ ಮೇಲೆ ವಿರೋದತ್ವವು ಹೆಚ್ಚಾದಾಗ ಸೌಲನು ೩೦೦೦ ಸೈನಿಕರ ಜೊತೆಗೆ ದಾವೀದನನ್ನು ಕೊಲ್ಲಬೇಕಂದು ಹೊರಟನು ಒಂದು ರಾತ್ರಿ ಸೈನಿಕರಲ್ಲಾ ನಿದ್ದೆ ಮಾಡುವಾಗ ದಾವೀದನು, ಅಬಿಷ್ಯೆಯ್ ಮತ್ತು ಒಬ್ಬ ಸೈನಿಕನು ಎದ್ದು ಸೌಲನು ಮಲಗಿರುವ ಸ್ಥಳಕ್ಕೆ ಹೋದರು.





ಆಗಾ ಅಬಿಷ್ಯಯ್ ದಾವೀದನಿಗೆ ಹೇಳಿದ್ದೆನೆಂದರೆ, ದೇವರು ನಿನ್ನ ವೈರಿಯನ್ನು ನಿನ್ನ ಕೈಯಲ್ಲಿ ಒಪ್ಪಿಸಿಕೊಟಿದ್ದಾರೆ ನೀನು ನಿನ್ನ ಈಟಿಯಿಂದ ತಿವಿ ನೆಲದಲ್ಲಿ ಹೂತು ಕೊಳ್ಳಲಿ ಎರಡನೆಯ ಸಾರಿ ತಿವಿಯುವ ಅವಶ್ಯವಿಲ್ಲ ಅಂದನು.



ದಾವೀದನು ಆತನ ಮಾತನ್ನು ಕೇಳದೆ
ಸೌಲನ ಗುಡಾರದಲ್ಲಿದ್ದ ಈಟಿ ಮತ್ತು
ಹೂಜಿಯನ್ನು ತಗೆದುಕೊಂಡು ಬೆಟ್ಟದ
ಸಾಲಿನಲ್ಲಿ ನಡೆದು ಹೋದನು. ಆಗ
ಸೌಲನು ಹೀಗೆಂದುಕೊಂಡನು, ಇಗಲೂ
ಸಹಾ ದಾವೀದನು ನನ್ನನ್ನು ಕೊಲ್ಲಲಿಲ್ಲ
ಎಂದು ತಿಳಿದು, ತಾನು ಮಾಡುವಂತದ್ದು
ತಪ್ಪೆಂದು ಆತನಿಗೆ ಆರಿವಾಯಿತು. ಆದರೆ
ದಾವೀದನು ಅತನ ಮಾತಿನ ಮೇಲೆ
ನಂಬಿಕೆಯಿಡಲಿಲ್ಲ.



ಸಮುವೇಲನು ತೀರಿಹೋದನು. ಈತನು ದೇವರ ಪ್ರವಾದಿಯಾಗಿದ್ದನು, ದೇವರು ಆಜ್ಞಾಪಿಸಿದಂತೆ ಮೊದಲು ಸೌಲನನ್ನು ನಂತರ ದಾವೀದನನ್ನು ಇಸ್ರಾಯೇಲ್ಯರ ರಾಜರನ್ನಾಗಿ ಅಭಿಷೇಕಿಸಿದನು. ಫಿಲಿಷ್ಟಿಯರು ಇಸ್ರಾಯೇಲ್ಯರಿಗೆ ವಿರೋಧವಾಗಿ ಆಕ್ರಮಣ ಮಾಡಿದಾಗ ಸೌಲನು ದೇವರಿಗೆ ವಿರೋಧವಾಗಿ ನಡೆದನು.

ಸತ್ತವರನ್ನು ಎಬ್ಬಿಸುವ ಮಾಂತ್ರಿಕಳ ಮೂಲಕವಾಗಿ ಸಮುವೇಲನನ್ನು ಎಬ್ಬಿಸಿ ಸೌಲನು ಸಂದೇಶವನ್ನು ಪಡೆದುಕೊಂಡನು.



“...ದೇವರು ನಿನ್ನನ್ನು ಬಿಟ್ಟು ನಿನ್ನ ವೈರಿಯಾದನು, ನಿನ್ನ ರಾಜ್ಯವನ್ನು ಕಿತ್ತು ನಿನ್ನ ಪಕ್ಕದವರಿಗೆ ಅಂದರೆ ದಾವೀದನಿಗೆ ಕೊಡುವನು, ನಾಳೆ ನೀನು ಮತ್ತು ನಿನ್ನ ಮಕ್ಕಳು ನನ್ನ ಬಳಗೆ ಬರುವಿರಿ ಮತ್ತು ದೇವರು ಇಸ್ರಾಯೇಲ್ಯರ ಸೈನ್ಯವನ್ನು ಫಿಲಿಷ್ಟಿಯರ ಕೈಯಿಂದ ತಪ್ಪಿಸುವನು”. ಈ ಸುದ್ದಿಯನ್ನು ಕೇಳಿದ ಸೌಲನು ಭಯ ಬ್ರಾಂತನಾದನು.



ಫಿಲಿಷ್ಟಿಯರು ಇಸ್ರಾಯೇಲ್ಯರಿಗೆ
ವಿರೋದವಾಗಿ ಯುದ್ದಮಾಡಿ
ಸೌಲನನ್ನು ಮತ್ತು ಆತನ
ಮಕ್ಕಳನ್ನು ಹಾಗೂ
ದಾವೀದನ ಒಳ್ಳೆಯ
ಸ್ನೇಹಿತನಾದ
ಯೋನಾತನನ್ನು
ಕೊಂದರು.



ಸೌಲನಿಗೆ ಬಾಣಗಳಿಂದ ಬಹಳ
ಗಾಯಗಳಾದಗ ಅತನು ತನ್ನ
ಆಯುದ ಹೋರುವವನಿಗೆ ನೀನು
ನಿನ್ನ ಈಟಿಯನ್ನು ತೆಗೆದು ನನ್ನನ್ನು
ಕೊಲ್ಲು ಇಲ್ಲವಾದರೆ ಆ ದುಷ್ಟ
ಜನರು ಬಂದು ನನ್ನನ್ನು ಕೊಂದು
ಅಪಕೀರ್ತಿಗೆ ಗುರಿಮಾಡಾರು.
ಇದನ್ನು ಕೇಳಿದ ಆಯುದ
ಹೋರುವವನು ಭಯಪಟ್ಟು
ಅದನ್ನು ಮಾಡದೆ ಇರುವಾಗ
ಸೌಲನು ಕತ್ತಿಯನ್ನು ತೆಗೆದು ಅದರ
ಮೇಲೆ ಬಿದ್ದು ಪ್ರಾಣಬಿಟ್ಟನು.





ಫಿಲಿಷ್ಟಿಯರು ಸೌಲನ ಮತ್ತು ಅವನ ಮಕ್ಕಳ ಶವವನ್ನು ತಗೆದುಕೊಂಡುಹೋಗಿ ಪಟ್ಟಣದ ಗೋಡೆಗೆ ತೂಗು ಹಾಕಿ ಸಂತೋಷದಿಂದ ಸಂಭ್ರಮಿಸಿ ಇಸ್ರಾಯೇಲ್ಯರ ಪಟ್ಟಣವನ್ನು ಸ್ವಾದಿನ ಮಾಡಿಕೊಂಡರು, ಆದರೆ ಇಸ್ರಾಯೇಲ್ಯರಲ್ಲಿ ಕೆಲವರು

ಶೂರರು ಅವರ ಶವವನ್ನು ಸಮಾಧಿ ಮಾಡುವುದಕ್ಕಿಂತ ಮುಂಚೆ ತಂದು ಸುಟ್ಟುಬಿಟ್ಟರು.



ಈ ಸುದ್ದಿಯನ್ನು ಕೇಳಿದ
ದಾವೀದನು ಮುಂಜಾನೆಯಿಂದ
ಸಂಜೆಯ ತನಕ ಸೌಲ ಮತ್ತು
ಅವನ ಮಗನಾದ
ಯೋನಾತಾನ ಹಾಗೂ
ಇಸ್ರಾಯೇಲ್ಯರು ಹೇಗೆ ಕತ್ತಿಯ
ಬಾಯಿಗೆ ತುತ್ತಾದರೆಂದು
ತಿಳಿದು ಉಪವಾಸದಿಂದ
ಗೋಳಾಡಿದನು.

ಸೌಲನು ದಾವೀದನನ್ನು ಕೊಲ್ಲಬೇಕೆಂದು
ಬಹಳವಾಗಿ ಪ್ರಯತ್ನಿಸಿದನು ಆದರೆ
ದಾವೀದನು ಸೌಲನನ್ನು ದೇವರ ಅಬಿಷೆಕ್ತನೆಂದು
ತಿಳಿದು ಆತನನ್ನು ಗೌರವಿಸಿದನು. ಅದುದ್ದರಿಂದ
ದೇವರು ದಾವೀದನನ್ನು ಗೌರವಿಸಿ ಸೌಲನ
ನಂತರ ಅವನನ್ನು ರಾಜನನ್ನಾಗಿ ಮಾಡಿದನು.



ಅರಸನಾದ ದಾವೀದನು (ಭಾಗ – 1)

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**1 ಸಮುವೇಲು 24–25, 2 ಸಮುವೇಲು 1–2**

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

# ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16